<u>ಕರ್ನಾಟಕ ಸರ್ಕಾರ</u>

ಸಂ:ಗ್ರಾಅಪ 60 ಗ್ರಾನೀಸ(2) 2015

2ನೇ ಮಹಡಿ, 'E' Block,
K.H.B Complex ಕಾವೇರಿ ಭವನ, ಕೆ.ಜಿ.ರಸ್ತೆ,
ಬೆಂಗಳೂರು-09, ದಿನಾಂಕ:07.01.2016

ಇವರಿಂದ:
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ:
ರಾಜ್ಯದ ಎಲ್ಲಾ (30) ಜಿಲ್ಲಾ ಪಂಚಾಯತ್‌ಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.

ಮಾನ್ಯರೆ,

ವಿಷಯ: 2015-16ನೇ ಸಾಲಿನ ಗ್ರಾಮೀಣ ಕುಡಿಯುವ ನೀರು ಪೂರೈಕೆ ಯೋಜನೆಗಳ ಕಾಮಗಾರಿ ಬಿಲ್ಲುಗಳನ್ನು ಪಾವತಿಸಲು ಮಾರ್ಗಸೂಚಿಗಳನ್ನು ಹೊರಡಿಸುವ ಕುರಿತು.

ಉಲ್ಲೇಖ:
1. ಸರ್ಕಾರದ ಪತ್ರ ಸಂ:ಗ್ರಾಅಪ 60 ಗ್ರಾನೀಸ(1)15 ದಿನಾಂಕ:06.07.2015
2. ಸರ್ಕಾರದ ಅ.ಸ.ಪತ್ರ ಸಂ:ಗ್ರಾಅಪ 36 ಗ್ರಾನೀಸ(2)15 ದಿನಾಂಕ:24.07.2015.

---

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2015-16ನೇ ಸಾಲಿನ ಗ್ರಾಮೀಣ ಕುಡಿಯುವ ನೀರು ಪೂರೈಕೆ ಯೋಜನೆಗಳ ಕಾಮಗಾರಿ ಬಿಲ್ಲುಗಳನ್ನು ಪಾವತಿಸಲು ಅಗತ್ಯ ಮಾರ್ಗಸೂಚಿಗಳನ್ನು ಹೊರಡಿಸಬೇಕಾಗಿರುತ್ತದೆ. ಆದುದರಿಂದ ಈ ಕೆಳಕಂಡ ನಿರ್ದೇಶನಗಳನ್ವಯ ಕ್ರಮವಹಿಸಲು ತಿಳಿಸಿದೆ.

- ಮೇಲ್ಕಂಡ ಉಲ್ಲೇಖಿತ ಸರ್ಕಾರದ ಪತ್ರಗಳಲ್ಲಿನ ನಿರ್ದೇಶನಗಳನ್ನು ತತ್‌ಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆಯಲಾಗಿದೆ.
- 2015-16ನೇ ಸಾಲಿನ ಗ್ರಾಮೀಣ ಕುಡಿಯುವ ನೀರು ಪೂರೈಕೆ ಯೋಜನೆಗಳ ಸಂಬಂಧ ಸರ್ಕಾರದಿಂದ ಬಿಡುಗಡೆಯಾಗುವ ಘಟಕಾಂಶವಾರು ಅನುದಾನಕ್ಕೆ ಎದುರಾಗಿ ಮಾತ್ರ ಕಾಮಗಾರಿಗಳ ಬಿಲ್ಲುಗಳನ್ನು ಬ್ಯಾಂಕಿಗೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಕಾರ್ಯಪಾಲಕ ಅಭಿಯಂತರರು ಮತ್ತು ಲೆಕ್ಕಾಧಿಕಾರಿಗಳು ನಿಗದಿತ ನಮೂನೆಯನ್ನು ಜಿಲ್ಲಾ ಪಂಚಾಯತ್‌ನ ಮುಖ್ಯ ಲೆಕ್ಕಾಧಿಕಾರಿಗಳ ಮೇಲುರುಜುನೊಂದಿಗೆ ಪಾವತಿಗಾಗಿ ಸಲ್ಲಿಸತಕ್ಕದ್ದು.
- ಸದರಿ ಯೋಜನೆಯಡಿ ಘಟಕಾಂಶವಾರು ಬಿಡುಗಡೆಯಾಗುವ ಅನುದಾನದ ಮಿತಿಯೊಳಗೆ ವೆಚ್ಚ ಭರಿಸಲು ಅಗತ್ಯ ಮುನ್ನೆಚ್ಚರಿಕೆಯನ್ನು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಕಾರ್ಯಪಾಲಕ ಅಭಿಯಂತರರು ಮತ್ತು ಲೆಕ್ಕಾಧಿಕಾರಿಗಳು ವಹಿಸತಕ್ಕದ್ದು.

- ಜಿಲ್ಲಾ ಪಂಚಾಯತ್‌ನ ಮುಖ್ಯ ಲೆಕ್ಕಾಧಿಕಾರಿಗಳು ಘಟಕವಾರು ಬಿಡುಗಡೆ ಮಾಡಿದ ಅನುದಾನದ ಮಿತಿಯಲ್ಲಿದ್ದರೆ ಮಾತ್ರ ನಿಗದಿಪಡಿಸಿದ ನಮೂನೆಗೆ ಮೇಲುರುಜುಗೊಳಿಸತಕ್ಕದ್ದು ಮತ್ತು ಆಯಾ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವೃತ್ತದ ಅಧೀಕ್ಷಕ ಅಭಿಯಂತರರು ಮೇಲ್ವಿಚಾರಣೆ ವಹಿಸಿಕೊಂಡು, ಕಾಲಕಾಲಕ್ಕೆ CE, RDWSDರವರ ಮುಖೇನ ಸರ್ಕಾರಕ್ಕೆ ಅನುಪಾಲನಾ ವರದಿಯನ್ನು ಸಲ್ಲಿಸತಕ್ಕದ್ದು.
- ಈ ಕುರಿತ ಸಂಪೂರ್ಣ ಮೇಲ್ವಿಚಾರಣೆಯನ್ನು CE, RDWSD ಮತ್ತು ಆಯಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ನಿರ್ವಹಿಸಿ ಯಾವುದೇ ಕಾರಣಕ್ಕೂ ಸರ್ಕಾರದಿಂದ ಘಟಕಾಂಶವಾರು ಬಿಡುಗಡೆಯಾಗುವ ಅನುದಾನವನ್ನು ಬೇರೆ ಘಟಕಗಳಿಗೆ ವರ್ಗಾಯಿಸದಂತೆ ನಿಗಾವಹಿಸತಕ್ಕದ್ದು. **ಈ ಸಂಬಂಧ ಸರ್ಕಾರದ ಮಾರ್ಗಸೂಚಿಗಳನ್ನು ಉಲ್ಲಂಘಿಸಿರುವುದು ಕಂಡುಬಂದಲ್ಲಿ ಸಂಬಂಧಪಟ್ಟವರ ಮೇಲೆ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲಾಗುವುದು.**

ತಮ್ಮ ವಿಶ್ವಾಸಿ,

(ಸುಭಾಷ್ ಚಂದ್ರ)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಪ್ರತಿ:**

1. ರಾಜ್ಯದ ಎಲ್ಲಾ(30) ಜಿಲ್ಲಾ ಪಂಚಾಯತ್‌ಗಳ ಅಧ್ಯಕ್ಷರುಗಳು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
2. ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಕಾವೇರಿ ಭವನ ಬೆಂಗಳೂರು
3. ರಾಜ್ಯದ ಎಲ್ಲಾ (4) ಅಧೀಕ್ಷಕ ಅಭಿಯಂತರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗಗಳ ವೃತ್ತಗಳು.
4. ರಾಜ್ಯದ ಎಲ್ಲಾ(38) ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗಗಳ ಕಾರ್ಯಪಾಲಕ ಅಭಿಯಂತರರು.
5. ರಾಜ್ಯದ ಎಲ್ಲಾ(30) ಜಿಲ್ಲಾ ಪಂಚಾಯತ್‌ಗಳ ಮುಖ್ಯ ಲೆಕ್ಕಾಧಿಕಾರಿಗಳು.
6. ಮ್ಯಾನೇಜರ್ ಸಿಂಡಿಕೇಟ್ ಬ್ಯಾಂಕ್, BWSSB ಬ್ರ್ಯಾಂಚ್ ಅವಿನ್ಯೂ ರಸ್ತೆ ಬೆಂಗಳೂರು.